ಕನ್ನಡ ಮಿಶ್ರಿತ ತೆಲುಗಿನಲ್ಲಿ ಉಲಿದಳು ಐಶ್ವರ್ಯ.

ಮೂವತ್ತೈದು ಸಾವಿರ ರುಪಾಯಿ ಸಂಭಾವನೆ ಕೊಡ್ತೀವಿ, ಸನ್ಮಾನಾನೂ ಮಾಡ್ತೀವಿ ಅಂತ ಮೇಷ್ಟ್ರು ಹೇಳುತ್ತಿದ್ದಂತೆ ಡಬ್ಬು ಮುಖ್ಯಂಕಾದು ಸಾರು. ನಿಮ್ಮಂತೋರ ದರ್ಶಕತ್ವಂಲೊ ನಾಟಕ ಸೇಸೇದೆ ನಾ ಅದೃಷ್ಟಮು ಅಂತ ವಿನಯವಾಗಿ ಹೇಳಿದ್ದನ್ನು ಕೇಳಿ ಮೇಷ್ಟ್ರಿಗೆ ಖುಷಿಯಾಯಿತು. ಕಾಮಿನಿ, ಪದ್ಮಿನಿಯರ ಪಾತ್ರಕ್ಕೆ ಡ್ಯಾನ್ಸ್ ಗೊತ್ತಿರೊ ಇಬ್ಬರು ಹುಡುಗೀರು ಬೇಕು. ಯಾರಾದರೂ ಗೊತ್ತಿದ್ದರೆ ತಿಳಿಸುವಂತೆ ಮೇಷ್ಟ್ರು ಹೇಳುತ್ತಿದ್ದಂತೆ ಐಶ್ವರ್ಯ, ನನ್ನ ತಂಗಿಯರೇ ಇದಾರೆ. ಇಬ್ಬರಿಗೂ ಹದಿನೈದು, ಹದಿನೈದು ಸಾವಿರ ಕೊಡಿ. ನಮ್ಮ ಕಾರಲ್ಲೇ ಬರ್ತೀವಿ. ಪೆಟ್ರೋಲ್ ಖರ್ಚು ಕೊಡಬೇಕು ಅಂತ ಷರತ್ತು ಹಾಕಿದಳು. ಮೇಷ್ಟ್ರು ಒಪ್ಪಿಕೊಂಡರು.

ಹೊಗೆಸೊಪ್ಪಿನ ವ್ಯಾಪಾರ ಮಾಡುತ್ತಿದ್ದ ಕಾಲದಲ್ಲಿ ಕಟ್ಟಿಸಿದ್ದ ತನ್ನ ಹಳೆಯ ಮನೆಯನ್ನು ಬಾಬಣ್ಣ ಪ್ರಾಕ್ಟೀಸಿಗೆ ಅಂತ ಬಿಟ್ಟುಕೊಟ್ಟ. ಮಾರನೇ ದಿನವೇ ಮೂರ್ಕಣ್ಣಪ್ಪನ ಅಳಿಯ ಮಾಲಿಂಗಪ್ಪ ಮೇಷ್ಟ್ರ ಮನೆಗೆ ಬಂದು ವಿಕ್ರಮ ರಾಜನ ಪಾತ್ರವನ್ನು ನನ್ನ ಮಗ ಸುರೇಶನಿಗೆ ಕೊಡಿ ಎಂದು ವಿನಂತಿ ಮಾಡಿಕೊಂಡ. ಸುರೇಶ ದುರ್ಗದ ಕಾಲೇಜಲ್ಲಿ ಓದುವಾಗ ನಾಟಕಗಳಲ್ಲಿ ಪಾತ್ರ ಮಾಡ್ತಿದ್ದ. ಅವನಿಗೆ ಸಿನಿಮಾ ಸೇರೊ ಹುಚ್ಚಿತ್ತು. ನಾನೇ ಎನ್‌ಕರೇಜು ಮಾಡಲಿಲ್ಲ ಅಂದ. ಮೇಷ್ಟ್ರು ಸುರೇಶನನ್ನು ಕರೆಸಿ ರಾಜನ ಮೇಕಪ್ ಹಾಕಿಸಿ ನೋಡಿದರು. ಅವನು ಥೇಟ್ ವಿಕ್ರಮ ರಾಜನಂತೇ ಕಾಣುತ್ತಿದ್ದ.

***

'ನಾಟಕಕ್ಕೆ ಲಕ್ಷ ರುಪಾಯಿ ಕೊಟ್ಟರು ಅಂತ ಮೂರ್ಕಣ್ಣಪ್ಪನ ಮೊಮ್ಮಗನಿಗೆ ರಾಜನ ಪಾತ್ರ. ನಿಮಗೆಲ್ಲ ಮಂತ್ರಿ, ಸೈನಿಕ, ಪುರೋಹಿತ, ನಕಲಿ ಶ್ಯಾಮ, ಕಾಲಾಳುಗಳ ಪಾತ್ರ. ಸ್ವಾಮಿ ಪಾತ್ರಕ್ಕೂ ಹೊರಗಿನವನು ಬೇಕಂತೆ! ನಿಮ್ಮತ್ರ ದುಡ್ಡಿದ್ದಿದ್ರೆ ನೀವೇ ರಾಜನ ಪಾತ್ರ ಮಾಡಬೌದಿತ್ತು' ಅಂತ ಇಸ್ಪೀಟ್ ರಾಜಣ್ಣನ ಮಗ ಸೀನ ಎಲ್ಲರ ಹತ್ರ ಹೇಳಿಕೊಂಡು ಓಡಾಡ್ತಿದಾನೆ ಅನ್ನೋದು ಮೇಷ್ಟ್ರ ಕಿವಿಗೆ ಬಿತ್ತು. ಪಾತ್ರಗಳ ಹಂಚಿಕೆ ವಿಷಯದಲ್ಲಿ ಅಸಮಾಧಾನ ಇದೆ ಅನ್ನೋದು ಗೊತ್ತಾಗಿ ಅದನ್ನು ನಿವಾರಿಸಲು ಎಲ್ಲಾ ಪಾತ್ರಧಾರಿಗಳನ್ನು ನಾಟಕದ ಮನೆಗೆ ಕರೆಸಿಕೊಂಡರು.

'ನಿಮಗ್ಯಾರಿಗೂ ನಾಟಕದಲ್ಲಿ ಪಾರ್ಟು ಮಾಡಿದ ಅನುಭವ ಇಲ್ಲ. ಇದು ಪೌರಾಣಿಕ ನಾಟ್ಕ. ನಿಮ್ಮೆಲ್ಲರನ್ನೂ ತಿದ್ದಿ ತೀಡಿ ಸಜ್ಜು ಮಾಡಬೇಕು. ನಾಟಕದ ಉಸಾಬರಿಯೇ ಬೇಡ ಅಮ್ತ ಮನೆಯಲ್ಲಿದ್ದೆ. ನೀವೇ ಬಂದು ತಾಂಬೂಲ ಕೊಟ್ಟು ಕೇಳಿಕೊಂಡ್ರಿ...' ಅನ್ನುತ್ತ ಎಲ್ಲರ ಮುಖ ನೋಡಿದರು. ಹತ್ತು ನಿಮಿಷ ಯಾರೂ ಮಾತಾಡಲಿಲ್ಲ. ಪಂಚಾಯ್ತಿ ಎಲೆಕ್ಷನ್ನಿನಲ್ಲಿ ಸುರೇಶನ ಎದುರು ನಿಂತು ಸೋತಿದ್ದ ಶಿವರಾಜ, 'ನೀವು ವಿಕ್ರಮರಾಜನ ಪಾತ್ರ ಕೊಟ್ಟಿದ್ದೀರಲ್ಲ, ಅವನು ಸೈನಿಕನ ಪಾತ್ರಕ್ಕೂ ಲಾಯಕ್ಕಿಲ್ಲ. ರಾಜನ ಪಾತ್ರವನ್ನು ಬೇರೆ ಯಾರಿಗಾದರೂ ಕೊಡಿ ಮೇಷ್ಟ್ರೇ...' ಅಂತ ಹೇಳಿ ಎದ್ದು ಹೋಗಿಬಿಟ್ಟ. ಶಿವರಾಜನ ಮಾತಿನಿಂದ ಮೇಷ್ಟ್ರಿಗೆ ಸಿಟ್ಟು ಬಂತು. 'ಏನಾದರೂ ಮಾಡಿಕೊಳ್ಳಿ, ನಾನು ನಾಟಕ ಆಡಿಸಲ್ಲ' ಅಂತ ಹೇಳಿ ಮನೆಗೆ ಹೋದರು.

ಮರುದಿನ ಬಾಬಣ್ಣನಿಗೆ ವಿಷಯ ಗೊತ್ತಾಯಿತು. ಎಲ್ಲ ಪಾತ್ರಧಾರಿಗಳಿಗೂ ಹೇಳಿ ಕಳಿಸಿದ. ಶಿವರಾಜ ನಂಗೆ ಹುಷಾರಿಲ್ಲ ಅಂತ ಹೇಳಿ ತಪ್ಪಿಸಿಕೊಂಡ. ನಾಟ್ಕ ಆಡ್ತೀವಿ ಅಂತ ನೀವೇ ಹೇಳಿ ಈಗ ತಕರಾರು ಮಾಡೋದು ಸರಿಯಲ್ಲ ಅಂತ ಬಾಬಣ್ಣ ಹೇಳಿದ. ಅವನ ಮಾತಿಗೆ ಯಾರೂ ಎದುರಾಡಲಿಲ್ಲ. ಶಿವರಾಜನನ್ನ ಕರೆಸಿ ಮಾತಾಡ್ತೀನಿ, ನೀವು ನಿಶ್ಚಿಂತೆಯಾಗಿ ಪ್ರಾಕ್ಟೀಸು ಮುಂದುವರಿಸಿ ಅಂತ ಮೇಷ್ಟ್ರಿಗೆ ಹೇಳಿ ಕಳಿಸಿದ.

'ಸ್ವಾಮಿ ಪಾತ್ರಕ್ಕೆ ಲಾಯಕ್ಕಾದೋರು ನಮ್ಮೂರಲ್ಲಿ ಇಲ್ಲ. ನಂಗೆ ಗೊತ್ತಿರೋರನ್ನೆಲ್ಲ ವಿಚಾರಿಸಿದೆ. ಯಾರೂ ಸಿಗ್ಲಾ ಇಲ್ಲ ಬಾಬಣ್ಣ. ಮಧುಗಿರಿಯಲ್ಲಿ ಒಬ್ಬರಿದ್ದಾರೆ ಅಂತ ಗೊತ್ತಾಯ್ತು. ಅಲ್ಲಿಗೂ ಹೋಗಿ ಬಂದೆ. ಉತ್ತಮ್‌ಕುಮಾರ್ ಅಂತ ಅವರ ಹೆಸ್ರು. ಮೊದಲು ಶನಿದೇವರ ಪಾತ್ರ ಮಾಡ್ತಿದ್ದರಂತೆ. ಸ್ವಾಮಿ ಪಾತ್ರಕ್ಕೆ ಹೇಳಿ ಮಾಡಿಸಿದಂಗಿದ್ದಾರೆ. ನಾನು ಸಾಬರವನು, ಶನಿದೇವರ ಪಾತ್ರ ಮಾಡೋದು ಈಗ ನಿಮ್ಮವರಿಗೆ ಇಷ್ಟ ಆಗಲ್ಲ ಅಂದರು. ಏನು ಮಾಡಬೇಕೋ ಗೊತ್ತಾಗ್ತ ಇಲ್ಲ...' ಅಂತ ಮೇಷ್ಟ್ರು ಅಸಹಾಯಕತೆ ಹೇಳಿಕೊಂಡರು.

'ಹಿಂದೆ ಶನಿಮಹಾತ್ಮೆ ಆಡಿಸಿದ್ರಲ್ಲ. ಆಗ ಸ್ವಾಮಿ